ಇಂದು ದಿ: **09.10.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಪಾಟೀ ಸವಾಲು **5** ರಿಂದ **9** ನೇ ಪ್ರತಿವಾದಿಗಳ ಪರ: ಶ್ರೀ ಆರ್. ಕೆ. ವಕೀಲರಿಂದ .

ನಾನು ದ್ವಿತೀಯ ಪಿಯುಸಿವರೆಗೆ ಓದಿರುತ್ತೇನೆ. ನನಗೆ ಓದಲು ಬರೆಯಲು ಬರುತ್ತದೆ. ನನಗೆ ವ್ಯವಹಾರ ಜ್ಞಾನ ಇರುತ್ತದೆ. ನನಗೂ ಮತ್ತು ವಾದಿ ಆಶಾ ಇವಳಿಗೂ 12 ವರ್ಷ ವಯಸ್ಸಿನ ಅಂತರ ಇರುತ್ತದೆ. ಈ ಕೇಸನ್ನು ಸಲ್ಲಿಸುವಾಗ ವಾದಿಗೆ 31 ವರ್ಷ ವಯಸ್ಸು ಇತ್ತು. ವಾದಿ 10 ನೇ ತರಗತಿಯವರೆಗೆ ಓದಿರುತ್ತಾಳೆ. ವಾದಿಯ ತವರೂರು ದೊಡ್ಡಕಿಟ್ಟದಹಳ್ಳಿ, ನಮ್ಮ ಊರಿನಿಂದ ದೊಡ್ಡಕಿಟ್ಟದಹಳ್ಳಿ 8 ಕಿ.ಮೀ ದೂರು ಇರುತ್ತದೆ. ನಾಕಿಕೆರೆ ಗ್ರಾಮದಿಂದ ನಂದನಹೊಸೂರು 6 ಕಿ. ಮೀ ದೂರ ಇರುತ್ತದೆ. ಮೂಲ ದಾವೆ ನಂ. 29/2019 ನ್ನು ಕೆ.ಎಸ್. ಆಶಾ ಇವಳು ಸಲ್ಲಿಸಿರುತ್ತಾಳೆ. ಪ್ರಕಾಶ ಎನ್ನುವವರು ಆಶಾ ಇವಳ ವಿರುದ್ಧ ಕೇಸನ್ನು ಸಲ್ಲಿರುತ್ತಾರೆ. ಪ್ರಕಾಶ ಇವರು ನಾಗೇಂದ್ರಪ್ಪ, ಶರಣಪ್ಪ, ಅಂಜಿನಪ್ಪ ಮತ್ತು ದ್ಯಾಮಪ್ಪ ಹಾಗೂ ಆಶಾ ಇವರ ವಿರುದ್ಧ ದಾವೆಯನ್ನು ಸಲ್ಲಿಸಿರುತ್ತಾರೆ. ಸದರಿ ದಾವೆ ಈ ನ್ಯಾಯಾಲಯದ ಮೂಲ ದಾವೆ ನಂ. 16/2020 ಎನ್ನುವುದು ನಿಜ. ಈ ನ್ಯಾಯಾಲಯದಲ್ಲಿ ಸದರಿ ಎರಡು ಕೇಸುಗಳು ನಡೆಯುತ್ತಿವೆ ಎನ್ನುವುದು ನಿಜ. ಆಶಾ ತಾನು ಸಹಿ ಮಾಡಿ ಕೇಸನ್ನು ಸಲ್ಲಿಸಿರುತ್ತಾಳೆ. ಮೂಲ ದಾವೆ ನಂ. 29/2019 ರಲ್ಲಿ ಎಲ್ಲವು ಸತ್ಯವಾಗಿದೆ ಎಂದು ಘೋಷಣಾತ್ಮಕ ಹೇಳಿಕೆಯನ್ನು ಆಶಾ ಸಲ್ಲಿಸಿರುತ್ತಾಳೆ. ಈ ಕೇಸಿನ ಮಾಹಿತಿಯನ್ನು ಯಾರು ಯಾರಿಗೆ ಹೇಳಿ ಸಲ್ಲಿಸಿರುತ್ತಾರೆ ಎಂದರೆ ಸಾಕ್ಷಿ ಅವಳೇ ಸ್ವಯಂ ಸಲ್ಲಿಸಿರುತ್ತಾಳೆ ಎಂದು ಹೇಳುತ್ತಾರೆ. ಆಶಾ ಸಲ್ಲಿಸಿದ ಕೇಸನ್ನು ಸಂಪೂರ್ಣ ಸಂಗತಿಯನ್ನು ನಾನು ಓದಿ ತಿಳಿದುಕೊಂಡಿರುತ್ತೇನೆ. ಈ ಕೇಸಿನ ಸಂಗತಿಗಳನ್ನು ತಿಳಿದುಕೊಂಡು ಅಧಿಕಾರ ಪತ್ರವನ್ನು ಪಡೆದು ನಾನು ಸಾಕ್ಷಿ ಹೇಳುತ್ತಿದ್ದೇನೆ. ಈ ಕೇಸಿನ ವಾದ ಪತ್ರದ ಸಂಗತಿಗಳನ್ನು ತಿಳಿದುಕೊಂಡು ಅದರ ಆಧಾರದ ಮೇಲೆ ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ನಿಜ. ಅದನ್ನು ಹೊರತುಪಡಿಸಿ ಬೇರೆ ಯಾವುದೇ ವಿಚಾರ ಹೇಳಲು ನಾನು ಬಂದಿಲ್ಲ ಎನ್ನುವುದು ನಿಜ. ನಾನು ಅವಳ ವೈಯಕ್ತಿಕ ವಿಚಾರದ ಬಗ್ಗೆ ಸಾಕ್ಷಿ ಹೇಳಲು ಬಂದಿಲ್ಲ. ಈ ಕೇಸಿನ ವಾದ ಪತ್ರದಲ್ಲಿನ ಸಂಗತಿಗಳ ಮೇಲೆ ಅವಳ ವೈಯಕ್ತಿಕ ವಿಚಾರವನ್ನು ಹೇಳಲು ನಾನು ಬಂದಿಲ್ಲ ಎನ್ನುವುದು ನಿಜ. ಆಶಾ ಇವಳು ಫ್ರಾಪ್ತ ವಯಸ್ಸಿಗೆ ಬರುವವರೆಗೆ ಹಾಗೂ ಅದರ ನಂತರ ಮದುವೆ ಆದಾಗಿನಿಂದ ಅವಳ ವೈಯಕ್ತಿಕ ವಿಚಾರಗಳ ಬಗ್ಗೆ ನನಗೆ ಗೊತ್ತಿರುತ್ತದೆ.

ಅವಿವಾಹಿತ ಸಮಯದಲ್ಲಿ ಅವಳು ಯಾರ್ಯಾರೊಂದಿಗೆ ಏನೇನು ವ್ಯವಹಾರ ಮಾಡಿದ್ದಳು ಎಂದು ಗೊತ್ತಿರುವುದಿಲ್ಲ. ಮದುವೆಯಾದ ನಂತರ ಯಾರ್ಯಾರೊಂದಿಗೆ ಏನೇನು ವ್ಯವಹಾರ ಅವಳು

ಮಾಡಿದ್ದಾಳೆ ಎಂದು ಗೊತ್ತಿರುವುದಿಲ್ಲ. ನನ್ನ ಮೇಲೆ ಈ ಎರಡು ದಾವೆಗಳಲ್ಲಿ ಯಾರು ಕೇಸು ಹಾಕಿಲ್ಲ. ದಿಃ 04.04.2019 ರ ಮೊದಲು ವಾದಿ ಏನಾದರೂ ವ್ಯವಹಾರ ಮಾಡಲು ಬೇರೆ ಯಾರಿಗೂ ಮುಕ್ತಿಯಾರ ನಾಮೆ ಪತ್ರ ಬರೆದುಕೊಟ್ಟಿಲ್ಲ. ನನಗೂ ಕೊಟ್ಟಿಲ್ಲ. ದಿಃ 04.04.2019 ರಂದು ಮತ್ತು ನಂತರ ಕೇಸನ್ನು ಸಲ್ಲಿಸುವವರೆಗೂ ಅವರ ವೈಯಕ್ತಿಕ ವ್ಯವಹಾರ ನಡೆಸಲು ನನಗೆ ಮುಕ್ತಿಯಾರ ನಾಮೆ ಪತ್ರ ಬರೆದುಕೊಟ್ಟಿಲ್ಲ. ಈ ದಾವೆಯನ್ನು ಸಲ್ಲಿಸಿದ ಎರಡು ವರ್ಷದ ನಂತರ ನನಗೆ ಮುಕ್ತಿಯಾರ ನಾಮೆಯನ್ನು ಬರೆದುಕೊಟ್ಟಿರುತ್ತಾಳೆ. ನನ್ನ ಪರವಾಗಿ ಮುಕ್ತಿಯಾರ ನಾಮೆಯ ಮೂಲಕ ಸಾಕ್ಷಿ ಹೇಳಲು ಅನುಮತಿಯನ್ನು ಕೊಡಬೇಕು ಎಂದು ಅರ್ಜಿಯನ್ನು ವಾದಿ ಸಲ್ಲಿಸಿರುತ್ತಾಳೆ. ಸದರಿ ಅರ್ಜಿಯನ್ನು ದಿಃ 15.03.2021 ರಂದು ಸಲ್ಲಿಸಿರುತ್ತಾಳೆ. ಸದರಿ ಅರ್ಜಿಯನ್ನು ಸಲ್ಲಿಸಿದಾಗ ಅದರ ಜೊತೆ ಏನೇನು ದಾಖಲೆಗಳನ್ನು ಸಲ್ಲಿಸಿರುತ್ತದೆ ಎಂದು ಗೊತ್ತಿರುವುದಿಲ್ಲ. ರಿಜಿಸ್ಟರ್ ಅಗ್ರಿಮೆಂಟ್ ಪ್ರಕಾರ ಸಾಕ್ಷಿ ಹೇಳಲು ನನಗೆ ನಿಪಿಃ 01 ಬರೆದುಕೊಟ್ಟಿರುತ್ತಾಳೆ. ಅದನ್ನು ಹೊರತುಪಡಿಸಿ ನನಗೆ ಬೇರೆ ಯಾವುದೇ ಅಧಿಕಾರ ಕೊಟ್ಟಿಲ್ಲ ಎನ್ನುವುದು ನಿಜ.

ವಾದಿ ಆಶಾ ಗೃಹಿಣಿ ಇರುತ್ತಾಳೆ. ಆಶಾ ಇವಳು ಮನೆಯ ಕೆಲಸ, ಹೊಲದ ಕೆಲಸ, ಮಕ್ಕಳ ವಿದ್ಯಾಭ್ಯಾಸ ನೋಡಿಕೊಳ್ಳುವುದು ಮತ್ತು ವಯಸ್ಸಾದ ಅತ್ತೆಯನ್ನು ನೋಡಿಕೊಳ್ಳುತ್ತಿದ್ದಾಳೆ. ಹೊಲದಲ್ಲಿ ಕೂಲಿಯವರಿಗೆ ಬುತ್ತಿಯನ್ನು ಮಾಡಿ ಕಳುಹಿಸುತ್ತಾಳೆ. ಈ ಎಲ್ಲಾ ಕೆಲಸಗಳನ್ನು ಇಂದಿನವರೆಗೂ ಮಾಡಿಕೊಂಡು ಬಂದಿರುತ್ತಾಳೆ. ಅವಳಿಗೆ ಬಿಪಿ ಶುಗರ್ ಇರುವುದಿಲ್ಲ. ಅವಳಿಗೆ 5 ವರ್ಷದ ಹಿಂದೆ ಎದೆಯಲ್ಲಿ ನೋವು ಬಂದಿತ್ತು. ಅದನ್ನು ಹೊರುತಪಡಿಸಿ ಅವಳಿಗೆ ಕೈ ನೋವು, ಕಾಲು ನೋವು ಮತ್ತು ಸೊಂಟ ನೋವು ಇರುವುದಿಲ್ಲ. ಕೆಲಸದ ಒತ್ತಡದಿಂದ ನ್ಯಾಯಾಲಯಕ್ಕೆ ಬಂದು ವಾದಿಗೆ ಸಾಕ್ಷಿ ಹೇಳಲು ಆಗುವುದಿಲ್ಲವೆಂದು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದ ಕಂಡಿಕೆ 1 ರಲ್ಲಿ ಹೇಳಿರುತ್ತದೆ. ನನಗೆ ಕೆಲಸದ ಒತ್ತಡ ಇದೆ ಎಂದು ನಿಪಿಃ 01 ರಲ್ಲಿ ವಾದಿ ಹೇಳಿರುತ್ತಾಳೆ. ನಿಪಿಃ 01 ನ್ನು ವಾದಿ ನನ್ನ ಹೆಸರಿಗೆ ಬರೆದುಕೊಟ್ಟಿರುತ್ತಾಳೆ. ನಿಪಿಃ 01 ನ್ನು ಯಾವ ದಿನಾಂಕದಂದು ಬರೆದುಕೊಟ್ಟಿರುತ್ತಾಳೆ ಎಂದು ನೆನಪು ಇರುವುದಿಲ್ಲ. ನಿಪಿಃ01 ನ್ನು ನ್ಯಾಯಾಲಯದಲ್ಲಿ ನಮ್ಮ ವಕೀಲರ ಮುಂದೆ ಬರೆದುಕೊಟ್ಟಿರುತ್ತಾಳೆ. ನಿಪಿಃ 01 ನ್ನು ನ್ಯಾಯಾಲಯದ ಮುಂದೆ ಸಲ್ಲಿಸಿ ಅದನ್ನು ಪ್ರಮಾಣೀಕರಿಸಿರುತ್ತಾಳೆ. ನಿಪಿಃ 01 ಕ್ಕೆ ಯಾರು ಸಾಕ್ಷಿಯಾಗಿ ಸಹಿ ಮಾಡಿರುತ್ತಾರೆ ಎಂದು ಗೊತ್ತಿರುವುದಿಲ್ಲ. ಆ ಸಮಯದಲ್ಲಿ ನಾನು ಹಾಜರು ಇದ್ದೆ. ನಿಪಿಃ 01 ಕ್ಕೆ ನಾನು ಮತ್ತು ನನ್ನ ಹೆಂಡತಿ ಸಹಿ ಮಾಡಿರುತ್ತೇವೆ. ಸದರಿ ಪತ್ರಕ್ಕೆ ಸಹಿಯನ್ನು ಮಾಡಿದ ಸಮಯ ನೆನಪು ಇರುವುದಿಲ್ಲ. ನ್ಯಾಯಾಲಯದಲ್ಲಿ ಸಲ್ಲಿಸಿರುವ ದಾಖಲೆಗಳಲ್ಲಿ ಅಥವಾ

ಬೇರೆ ದಾಖಲೆಗಳಲ್ಲಿ ಮತ್ತು ಮುಕ್ತಿಯಾರ ನಾಮೆಯಲ್ಲಿರುವ ವಾದಿಯ ಸಹಿ ವ್ಯತ್ಯಾಸ ಇದ್ದರೆ ಅದನ್ನು ನೋಡಿ ನಾನು ಹೇಳುತ್ತೇನೆ. ವಾದ ಪತ್ರ ಮತ್ತು ನಿಪಿಃ 01 ರಲ್ಲಿರುವ ಸಹಿ ನನ್ನ ಹೆಂಡತಿಯ ಸಹಿ ಇರುತ್ತವೆ. ವಕಾಲತ್ ನಲ್ಲಿರುವ ಸಹಿಯು ವಾದಿಯ ಸಹಿ ಇರುತ್ತದೆ. ವಕಾಲತ್, ವಾದಪತ್ರ ಮತ್ತು ಮುಕ್ತಿಯಾರ ನಾಮೆಯಲ್ಲಿ ವಾದಿಯ ಸಹಿ ಸ್ವಲ್ಪ ಸ್ವಲ್ಪ ವ್ಯತ್ಯಾಸ ಇರುತ್ತದೆ. ನಿಪಿಃ 01 ನ್ನು ನನಗೆ ವಾದಿ ಬರೆದುಕೊಟ್ಟಿಲ್ಲ ಎಂದರೆ ಸರಿಯಲ್ಲ. ವಾದ ಪತ್ರ ಮತ್ತು ನಿಪಿಃ 01 ರಲ್ಲಿ ನನ್ನ ಗಂಡನಿಗೆ ಕ್ರಯದ ಕರಾರಿನ ವ್ಯವಹಾರದ ಬಗ್ಗೆ ತಿಳುವಳಿಕೆ ಇರುತ್ತದೆ ಎಂದು ವಾದಿ ಹೇಳಿರುತ್ತಾಳೆ. ನಿಪಿಃ1 ಮತ್ತು ವಾದ ಪತ್ರದಲ್ಲಿ ನಿಪಿಃ 02 ರ ಬಗ್ಗೆ ನನಗೆ ತಿಳುವಳಿಕೆ ಇದೆ ಎಂದು ವಾದಿ ಹೇಳಿಲ್ಲ ಎನ್ನುವುದು ಗೊತ್ತಿರುವುದಿಲ್ಲ. ಮಧ್ಯಂತರ ಅರ್ಜಿ ಸಂಖ್ಯೆ-2 ರ ಜೊತೆ ಸಲ್ಲಿಸಿದ ನನ್ನ ಪ್ರಮಾಣ ಪತ್ರದಲ್ಲಿ ಕ್ರಯದ ಕರಾರಿನ ಬಗ್ಗೆ ನನಗೆ ಮಾಹಿತಿ ಇದೆ ಎಂದು ಹೇಳಿಲ್ಲ ಎನ್ನುವುದು ನಿಜ. ನನ್ನ ಪ್ರಮಾಣ ಪತ್ರದಲ್ಲಿ ಇರುವ ವಿಷಯಗಳು ಏನು ಇವೆ ಎಂದು ತಿಳಿದುಕೊಂಡು ಬಂದು ಇಂದು ಸಾಕ್ಷಿ ಹೇಳುತ್ತಿದ್ದೇನೆ. ಪ್ರತಿವಾದಿಗಳು ಏನೇನು ತಕರಾರು ಹಾಕಿರುತ್ತಾರೆ ಹಾಗೂ ವಾದಿ ಮತ್ತು ಪ್ರತಿವಾದಿಗಳು ಏನೇನು ದಾಖಲೆಗಳನ್ನು ಹಾಕಿರುತ್ತಾರೆ ಎಂದು ತಿಳಿದುಕೊಂಡು ಬಂದು ಸಾಕ್ಷಿ ಹೇಳುತ್ತಿದ್ದೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣಪತ್ರವನ್ನು ನನ್ನ ಹೆಂಡತಿ ಹೇಳಿ ಬರೆಪಸಿರುತ್ತಾಳೆ. ಸದರಿ ಪ್ರಮಾಣ ಪತ್ರದಲ್ಲಿ ಏನು ಇದೆ ಎಂದು ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ಸರಿಯಲ್ಲ. ಸದರಿ ಪ್ರಮಾಣ ಪತ್ರದ 2 ನೇ ಪುಟದ 1 ನೇ ಪ್ಯಾರಾದಲ್ಲಿ ದಾವಾ ಸ್ವತ್ತಿನ ಬಗ್ಗೆ ಏನು ಹೇಳಿರುತ್ತದೆ ಎಂದು ನೆನಪು ಇರುವುದಿಲ್ಲ. ಸದರಿ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ಏನೇನು ಬರೆದಿರುತ್ತದೆ ಎಂದು ನನಗೆ ನೆನಪು ಇರುವುದಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ಏನೇನು ಬರೆದಿದೆ ಎಂದು ಈಗ ಹೇಳಲು ನೆನಪು ಇರುವುದಿಲ್ಲ. ಸದರಿ ಪ್ರಮಾಣ ಪತ್ರದಲ್ಲಿ ಬರೆದ ವಿಷಯಗಳು ನನಗೆ ಗೊತ್ತಿಲ್ಲದೆ ಇರುವುದರಿಂದ ನೆನಪಿಸಿಕೊಂಡು ಹೇಳಲು ಆಗುತ್ತಿಲ್ಲ ಎನ್ನುವುದು ನಿಜ.

ನಿಪಿಃ 02 ರಲ್ಲಿರುವ ವಿಷಯಗಳ ಬಗ್ಗೆ ಮಾತ್ರ ತಿಳಿದುಕೊಂಡು ಇಂದು ಸಾಕ್ಷಿ ಹೇಳಲು ಬಂದಿರುತ್ತೇನೆ ಎನ್ನುವುದು ನಿಜ. ನಿಪಿಃ 02 ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ನೊಂದಣಿ ಆಗುವ ಪೂರ್ವದಲ್ಲಿ ಹಾಗೂ ನೊಂದಣಿ ಆದ ನಂತರ ಏನೇನು ವ್ಯವಹಾರಗಳು ಆಗಿರುತ್ತವೆ ಎಂದರೆ ಸಾಕ್ಷಿ ಏನು ವ್ಯವಹಾರ ಆಗಿಲ್ಲ ಎಂದು ಹೇಳುತ್ತಾರೆ. ನನ್ನ ಪ್ರಮಾಣ ಪತ್ರದಲ್ಲಿ ವಾದಿ ವಾದ ಪತ್ರದಲ್ಲಿ ಹೇಳಿರುವ ವಿಷಯಗಳನ್ನು ಅನುಸರಿಸಿ ಅವರ ಪರ ಪ್ರಮಾಣ ಪತ್ರ ಸಲ್ಲಿಸಿರುತ್ತೇನೆ ಎನ್ನುವುದು ನಿಜ. ಅದರ ಹೊರತಾಗಿ ಯಾವುದೇ ವಿಷಯಗಳು ನನಗೆ ಗೊತ್ತಿಲ್ಲ. ವಾದಪತ್ರದಲ್ಲಿ ಮತ್ತು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಹಾಗೂ ನಿಪಿಃ 02 ರಲ್ಲಿ ಹೇಳಿದಂತೆ ಕ್ರಯದ ಮೊತ್ತ 10,80,000/-

ರೂ.ಗಳಲ್ಲಿ ಮುಂಗಡವಾಗಿ 4,60,000/- ರೂ.ಗಳನ್ನು ವಾದಿ ಕೊಡಲು ಅವಳ ಬಳಿ ಹಣ ಎಲ್ಲಿ ಇತ್ತು ಎನ್ನುವುದಕ್ಕೆ ದಾಖಲೆಯನ್ನು ಹಾಜರುಪಡಿಸಿದ್ದೀರ ಎಂದರೆ ಸಾಕ್ಷಿ ಅವಳ ಸ್ವಂತ ಹಣ ಇಲ್ಲ ಕುಟುಂಬದ ಆದಾಯ ಎಂದು ಹೇಳುತ್ತಾರೆ. ನಿಪಿ:2 ರಲ್ಲಿ ಹೇಳಿದಂತೆ ಮುಂಗಡವಾಗಿ 4,60,000/- ರೂ.ಗಳನ್ನು ವಾದಿ ಕೊಟ್ಟಿರುತ್ತಾಳೆ ಎನ್ನುವುದಕ್ಕೆ ದಾಖಲೆಗಳು ಇರುವುದಿಲ್ಲ ಆದರೆ ನಗದು ಹಣ ಕೊಟ್ಟಿರುತ್ತದೆ. ಸದರಿ ನಗದು ಹಣ ಕೊಟ್ಟಿರುವುದರ ಬಗ್ಗೆ ರಶೀದಿ ಇರುವುದಿಲ್ಲ. ಯಾರ್ಯಾರಿಗೆ ಎಷ್ಟೆಷ್ಟು ಹಣ ಪಾವತಿ ಮಾಡಿರುತ್ತದೆ ಎಂದು ದಾಖಲೆ ಇರುವುದಿಲ್ಲ.

**ಮುಂದುವರೆದ ಪಾಟೀ ಸವಾಲು ನ್ಯಾಯಾಲಯದ ಸಮಯ ಮುಗಿದಿದ್ದರಿಂದ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.